# ಕರ್ನಾಟಕದ ಶಿವಶರಣರು ಮತ್ತು ಶ್ರೀರಾಮಕೃಷ್ಣ ಪರಮಹಂಸರು- ಕೆಲವು ಸಾಮ್ಯಗಳು - ೧

ಡಾ. ಜಿ.ಎಸ್. ಶಿವರುದ್ರಪ್ಪ

ತಮ್ಮ ಅದ್ಭುತ ಅನುಭವಗಳಿಂದ ಆಧ್ಯಾತ್ಮಿಕ ಸಾಮ್ರಾಜ್ಯದ ಎಲ್ಲ ಸಂಪತ್ತನ್ನೂ ತಮ್ಮದಾಗಿಸಿಕೊಂಡ ಶ್ರೀರಾಮಕೃಷ್ಣರು ಇತರ ಅನುಭಾವಿಗಳನ್ನು ತಿಳಿಯಲು ನೆರವಾಗುವ ಸಂಪರ್ಕ ಸಾಧನವಾಗಿದ್ದಾರೆ. ಶಿವಶರಣರ ಅನುಭಾವಗಳನ್ನೆಲ್ಲ ವಿಶ್ಲೇಷಿಸಿ ಶ್ರೀರಾಮಕೃಷ್ಣರ ಸಾಧನೆ, ಅನುಭಾವಗಳೊಂದಿಗೆ ತುಲನಾತ್ಮಕವಾಗಿ ಪರಿಶೀಲಿಸಿರುವ ಲೇಖಕರು ಕನ್ನಡದ ರಾಷ್ಟ್ರಕವಿಗಳು; ರಾಮಕೃಷ್ಣ–ವಿವೇಕಾನಂದ ವಿಚಾರಧಾರೆಯಿಂದ ಬಹುಮಟ್ಟಿಗೆ ಪ್ರಭಾವಿತರಾಗಿದ್ದಾರೆ.

ಒಂದು ನಿಶ್ಚಿತವಾದ ಎತ್ತರದ ಪ್ರಾಕೃತಿಕ ಪರಿಸರಗಳಲ್ಲಿ ಹವಾಮಾನ ಹಾಗೂ ಇನ್ನಿತರ ಲಕ್ಷಣಗಳು ಹೆಚ್ಚು ಕಡಿಮೆ ಒಂದೇ ರೀತಿಯವಾಗಿರುತ್ತವೆ. ವಾತಾವರಣದಲ್ಲಿನ ನಿರ್ಮಲತೆ, ಶಿಖರಗಳ ಭವ್ಯತೆ, ಮನಸ್ಸನ್ನು ಪ್ರಸನ್ನಗೊಳಿಸುವ ಪರಿಸರ, ಮೌನ, ಗಾಂಭೀರ್ಯ ಇತ್ಯಾದಿ ಲಕ್ಷಣಗಳು ಸಮಾನವಾಗಿ ಕಂಡುಬರುತ್ತವೆ. ಆದರೆ ಕೆಳಗಿನ ಸ್ತರದಲ್ಲಿನ ಏರಿಳಿತಗಳೂ, ಪ್ರಪಾತಗಳೂ, ತುಮುಲಗಳೂ ಅನೇಕ ರೀತಿಯವಾಗಿರುತ್ತವೆ. ಅದರಂತೆಯೇ ಪ್ರಾಯೋಜನಿಕ ಪ್ರಪಂಚದ ಜಟಿಲ ಕುಟಿಲ ಮಾಯಾ ತುಮುಲ ವಲಯಗಳನ್ನು ಮೀರಿ ಮೇಲೇರಿದ ವ್ಯಕ್ತಿಗಳು ಜಗತ್ತಿನ ಯಾವುದೇ ದೇಶದ, ಯಾವುದೇ ಕಾಲಗಳಲ್ಲಿಯೂ ಪಡೆಯುವ ಅನುಭವಗಳೂ, ಮಾಡುವ ಆಲೋಚನೆಗಳೂ ಹೆಚ್ಚುಕಡಿಮೆ ಸಮಾನವಾದ ಅಂಶಗಳನ್ನು ಒಳಗೊಂಡಿರುತ್ತವೆ. ಆ ಅನುಭವಗಳನ್ನು ಕುರಿತು ಅವರು ಬಳಸುವ ಭಾಷೆ, ಪರಿಭಾಷೆಗಳಲ್ಲಿ ವ್ಯತ್ಯಾಸಗಳಿದ್ದರೂ, ಅವರ ಅನುಭವಗಳು ವಿಶ್ವ ಸಾಮಾನ್ಯವೂ, ಜಗತ್ತಿನ ಬಗ್ಗೆ ಅಪಾರವಾದ ಅನುಕಂಪೆಯಿಂದ ಕೂಡಿದವುಗಳೂ ಆಗಿರುತ್ತವೆ. ಇಂತಹ ಒಂದು ಎತ್ತರದ ನೆಲೆಗೆ ಏರಿದವರನ್ನು ನಾವು ಮಹಾವ್ಯಕ್ತಿಗಳೆಂದೋ, ಸಂತರೆಂದೋ, ಅನುಭಾವಿಗಳೆಂದೋ ಗುರುತಿಸುತ್ತೇವೆ. ಆಧುನಿಕ ಯುಗದ ಸಂತಶ್ರೇಷ್ಠರೂ, ಸರ್ವಧರ್ಮ ಸಮನ್ವಯಾಚಾರ್ಯರೂ, ಯುಗ ಪ್ರವರ್ತಕರೂ ಎಂಬ ಪ್ರಶಂಸೆ, ಗೌರವಗಳಿಗೆ ಪಾತ್ರರಾಗಿರುವ ಶ್ರೀರಾಮಕೃಷ್ಣ ಪರಮಹಂಸರು ಈ ಬಗೆಯ ಎತ್ತರಕ್ಕೆ ಏರಿದ ಮಹಾ ಅನುಭಾವಿಗಳು.

ಶ್ರೀರಾಮಕೃಷ್ಣರ ಬದುಕು ಹಾಗೂ ಬೋಧನೆಗಳನ್ನು ಗಮನಿಸಿದರೆ, ಅವರ ಅನುಭವ ಹಾಗೂ ವಿಚಾರಗಳು ಜಗತ್ತಿನ ಎಲ್ಲ ದೇಶದ, ಎಲ್ಲ ಕಾಲದ ಇದೇ ಬಗೆಯ ವ್ಯಕ್ತಿಗಳ ಅನುಭವ ಮತ್ತು ವಿಚಾರಗಳೊಂದಿಗೆ ಸಂವಾದಿಯಾಗುವುದನ್ನು ಗುರುತಿಸಬಹುದು. ಇದರಿಂದ ನಿಷ್ಪನ್ನವಾಗುವ ಸಂಗತಿಯೇನೆಂದರೆ, ರಾಮಕೃಷ್ಣರ ಮೂಲಕ ಈ ಅನುಭಾವಿಕ ಪರಂಪರೆ ಮುಂದುವರಿದುಕೊಂಡು ಬಂದಿದೆ ಅನ್ನುವುದು ಮಾತ್ರವಲ್ಲ, ಶ್ರೀರಾಮಕೃಷ್ಣರ ವ್ಯಕ್ತಿನಿಷ್ಠ ಆಧ್ಯಾತ್ಮಿಕ ಪ್ರಯೋಗಾಲಯದ ಮೂಲಕ ಪ್ರಮಾಣೀಕರಿಸಲ್ಪಟ್ಟು ಪುನರ್ ವ್ಯಾಖ್ಯಾನವನ್ನು ಪಡೆದುಕೊಂಡು ಅನನ್ಯವಾಗಿದೆ. ಈ ಕಾರಣದಿಂದ ಜಗತ್ತಿನ ಇದೇ ಬಗೆಯ ಸಾಧಕ ವರೇಣ್ಯರ ಅನುಭವಗಳ ಮೂಲಕ ಶ್ರೀರಾಮಕೃಷ್ಣರನ್ನೂ, ಶ್ರೀರಾಮಕೃಷ್ಣರ ಮೂಲಕ ಇದೇ ಬಗೆಯ ಇತರರ ಅನುಭವಗಳನ್ನೂ ನೋಡುವುದು ಅತ್ಯಂತ ಅಗತ್ಯವೂ, ಮೌಲಿಕವೂ ಆದ ಸಂಗತಿಯಾಗಿದೆ.



ಫ್ರಾಂಕ್ ಡೋರಕ್‌ನ ಶ್ರೀರಾಮಕೃಷ್ಣರ ಚಿತ್ರ

ನಿದರ್ಶನಕ್ಕೆ ಕರ್ನಾಟಕದ ಹನ್ನೆರಡನೆಯ ಶತಮಾನದ ಶಿವಶರಣರ ಅಥವಾ ವಚನಕಾರರ ಅನುಭವ ಹಾಗೂ ವಿಚಾರಗಳನ್ನು ನೋಡೋಣ: ಶಿವಶರಣರು ಎಂಬ ಈ ಮಾತನ್ನು ಬಸವಣ್ಣನವರ ವ್ಯಕ್ತಿಕೇಂದ್ರದಲ್ಲಿ ನಡೆದ ಸಾಮಾಜಿಕ–ಧಾರ್ಮಿಕ ಆಂದೋಳನವೊಂದರಲ್ಲಿ ಪಾಲುಗೊಂಡ ಜನಸಮೂಹವನ್ನು ಕುರಿತು ಬಳಸಲಾಗಿದೆ. ಈ ಶಿವಶರಣರು ತಮ್ಮ ಅಂತರಂಗದ ಅನುಭವಗಳನ್ನು ಅಚ್ಚಗನ್ನಡದ ಗದ್ಯ–ಪದ್ಯ ರೂಪದ ಅಭಿವ್ಯಕ್ತಿಯೊಂದರಲ್ಲಿ ತೋಡಿಕೊಂಡಿದ್ದರಿಂದ ಈ ರೂಪಗಳನ್ನು 'ವಚನ'ಗಳೆಂದು ಕರೆಯಲಾಗಿದೆ. ಪ್ರತಿಯೊಬ್ಬರೂ ಹೀಗೆ ವಚನಗಳನ್ನು ಬರೆದದ್ದರಿಂದ ಅವರನ್ನು 'ವಚನಕಾರ'ರೆಂದೂ ಕರೆಯಲಾಗುತ್ತಿದೆ. ಅಂದಿನ ಸಮಾಜದ ವಿವಿಧ ಸ್ತರಗಳಿಂದ ಬಂದ ಈ ವಚನಕಾರರು ವೈದಿಕ ಸಂಪ್ರದಾಯದ ವರ್ಣವ್ಯವಸ್ಥೆಯ ಜೀವವಿರೋಧಿ ಹಾಗೂ ಜೀವನವಿರೋಧೀ ಧೋರಣೆಗಳನ್ನು ಪ್ರಶ್ನಿಸುತ್ತ, ಪ್ರತಿಭಟಿಸುತ್ತ, ಶಿವಭಕ್ತಿಯ ಮೂಲಮಾನದಲ್ಲಿ ಸಮಾನತೆಯ ಒಂದು ಸಮಾಜವನ್ನು ನೆಲೆಗೊಳಿಸುವ

'ವೀರಶೈವ' ವೆಂಬ ಧರ್ಮವನ್ನು ಪ್ರವರ್ತನಗೊಳಿಸಿದರು. ಗಂಡೆನ್ನದೆ, ಹೆಣ್ಣೆನ್ನದೆ, ಮೇಲೆನ್ನದೆ, ಕೀಳೆನ್ನದೆ ಎಲ್ಲರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಧಾರ್ಮಿಕ ನೆಲೆಯೊಂದನ್ನು ಆ ಕಾಲಕ್ಕಾದರೂ ನಿರ್ಮಿಸುವ ಸಾಹಸದಲ್ಲಿ ತೊಡಗಿದರು. ಈ ಶಿವಶರಣರು ಅಥವಾ ವಚನಕಾರರು ಏಕಕಾಲಕ್ಕೆ ಆಧ್ಯಾತ್ಮಿಕ ಸಾಧಕರೂ, ಸಮಾಜ ಸುಧಾರಕರೂ ಆಗಿದ್ದಾರೆ. ತಮ್ಮ ಆಧ್ಯಾತ್ಮಿಕ ಅನುಭವಕ್ಕೆ ಅವರು ಕೊಟ್ಟ ಹೆಸರು 'ಅನುಭಾವ' ಅನ್ನುವುದು. ಈಗ ಇಂಗ್ಲಿಷಿನಲ್ಲಿ ಇರುವ 'ಮಿಸ್ಟಿಸಿಸಂ' ಎಂಬ ಪದಕ್ಕೆ ಸರಿಯಾದ ಕನ್ನಡ ಪದವೆಂದರೆ, 'ಅನುಭಾವ'. 'ಅನುಭಾವ' ದೈವೀ ಅನುಭವವನ್ನು ಕುರಿತು ಹೇಳುವ ಮಾತು. ಜೀವ ದೈವತ್ವಕ್ಕೆ ಹಂಬಲಿಸುವುದು, ಆ ಅನುಭವವನ್ನು ಪಡೆಯುವುದು ಮತ್ತು ತಾನೇ ಅದಾಗುವುದು – ಈ ಅನುಭಾವದ ಲಕ್ಷಣ. 'ಅನುಭಾವ' ಎಂಬ ಈ ಪದವನ್ನು ಭಾರತೀಯ ತತ್ವಶಾಸ್ತ್ರದ ಭಂಡಾರಕ್ಕೆ ಹನ್ನೆರಡನೆಯ ಶತಮಾನದಷ್ಟು ಹಿಂದೆ ಕೊಟ್ಟವರು ಈ ಶಿವಶರಣರು. ಈ ಶರಣರ 'ಅನುಭಾವ' ಸಾಧನೆಯಲ್ಲಿಯ ಎಷ್ಟೋ ವಿಚಾರಗಳು ಶ್ರೀರಾಮಕೃಷ್ಣರ ಆನುಭಾವಿಕ ವಿಚಾರಗಳನ್ನು ನೆನಪಿಗೆ ತರುವಷ್ಟು ಸಮ್ಮೃದ್ಧವಾಗಿವೆ ಅನ್ನುವುದು ಸ್ವಾರಸ್ಯದ ಸಂಗತಿಯಾಗಿದೆ.



ಬಸವಣ್ಣನವರೇ ಮುಂತಾದ ಶಿವಶರಣರು

ಇಪ್ಪತ್ತನೆಯ ಶತಮಾನದ ಸಂತಶ್ರೇಷ್ಠರಾದ ಶ್ರೀರಾಮಕೃಷ್ಣರ ಹಾಗೂ ಇಂದಿಗೆ ಎಂಟು ಶತಮಾನಗಳ ಹಿಂದಿನ ಶಿವಶರಣರ ವಿಚಾರಗಳನ್ನು ಹೀಗೆ ಹೋಲಿಸಿ ನೋಡುವಾಗ ಅವರವರು ಬದುಕಿದ ಕಾಲ, ದೇಶ, ಪರಿಸರ ಮತ್ತು ಉದ್ದೇಶಗಳನ್ನು ನಿರ್ಲಕ್ಷಿಸಬಾರದು. ಶಿವಶರಣರ ಕೇಂದ್ರವ್ಯಕ್ತಿಯಾದ ಬಸವಣ್ಣನವರು ಶ್ರೀರಾಮಕೃಷ್ಣರಂತೆಯೇ ವೈದಿಕ ಸಂಪ್ರದಾಯಸ್ಥರ ಮನೆಯಲ್ಲಿ ಹುಟ್ಟಿದವರು ಮತ್ತು ಆ ವೈದಿಕ ಸಂಪ್ರದಾಯದ ತರ–ತಮ ಧೋರಣೆಗಳನ್ನು ಧಿಕ್ಕರಿಸಿದವರು. 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ' ಉದ್ದೇಶವಿದ್ದವರು. ಬಸವಣ್ಣನವರ ಜತೆಗೆ ಬಂದು ಹೊಸ ಧಾರ್ಮಿಕ ಆಂದೋಲನಕ್ಕೆ ಸೇರಿಕೊಂಡವರಲ್ಲಿ ಅಲ್ಲಮ ಪ್ರಭು, ಅಕ್ಕ ಮಹಾದೇವಿ, ಸಿದ್ಧರಾಮ ಇಂತಹ ಅನುಭಾವಿಗಳು ಮಾತ್ರವಲ್ಲ, ಅಂದಿನ ಸಮಾಜದ ವಿವಿಧ ಹಂತಗಳಿಂದ ಬಂದ ಶ್ರೀಸಾಮಾನ್ಯರೂ ಇದ್ದರು. ಹಾಗೆಯೇ ಶ್ರೀರಾಮಕೃಷ್ಣರ ವ್ಯಕ್ತಿತ್ವದಿಂದ ಆಕರ್ಷಿತರಾಗಿ ಅವರ ಬಳಿಗೆ ಬಂದವರೂ ಅಂದಿನ ಸಮಾಜದ ವಿವಿಧ ಸ್ತರಗಳನ್ನೂ, ಧಾರ್ಮಿಕ ಪಂಥಗಳನ್ನೂ ಪ್ರತಿನಿಧಿಸುವವರಾಗಿದ್ದಾರೆ. ಆದರೆ ಮುಖ್ಯವಾದ ವ್ಯತ್ಯಾಸವೆಂದರೆ ಶಿವಶರಣರು ಪುರೋಹಿತಶಾಹಿ ಪ್ರವೃತ್ತಿಯ ಕೇಂದ್ರಸ್ಥಾನಗಳಾಗಿದ್ದ ದೇವಸ್ಥಾನಗಳನ್ನು ಅತ್ಯಂತ ಉಗ್ರವಾಗಿ ನಿರಾಕರಿಸಿ, ದೈವತ್ವದ ಕಲ್ಪನೆಯನ್ನು ಮನುಷ್ಯನ ಶರೀರಕ್ಕೆ ಹಾಗೂ ಆತ ಧರಿಸಬೇಕಾದ ಇಷ್ಟಲಿಂಗದ ಕಡೆಗೆ ಸ್ಥಳಾಂತರಿಸಿದರು.

ಆದರೆ ಶ್ರೀರಾಮಕೃಷ್ಣರು ದಕ್ಷಿಣೇಶ್ವರದ ಕಾಳಿಯ ದೇವಸ್ಥಾನದಲ್ಲಿ ಇದ್ದುಕೊಂಡು, ಜಗನ್ಮಾತೆಯಾದ ಕಾಳಿಯ ಉಪಾಸನೆಯ ಮೂಲಕವೇ ತಮ್ಮ ಅಧ್ಯಾತ್ಮಸಿದ್ಧಿಯನ್ನು ಪಡೆದವರು. ಒಂದು ಮಾತಿನಲ್ಲಿ ಹೇಳುವುದಾದರೆ, ಶ್ರೀರಾಮಕೃಷ್ಣರು ದೇವಸ್ಥಾನದಲ್ಲಿ ಇದ್ದುಕೊಂಡೇ ದೇವಸ್ಥಾನವನ್ನು ಮೀರಿದವರು. ಆದರೆ ಶಿವಶರಣರು ದೇವಸ್ಥಾನಗಳನ್ನು ನಿರಾಕರಿಸಿ, ಇಷ್ಟಲಿಂಗ ನಿಷ್ಠೆಯ ಮೂಲಕ ವೀರಶೈವವೆಂಬ ಧರ್ಮವನ್ನು ನೆಲೆಗೊಳಿಸಿದವರು. ಶ್ರೀರಾಮಕೃಷ್ಣರು ದೇವಸ್ಥಾನವನ್ನೂ, ತಮ್ಮ ಇಷ್ಟದೈವವಾದ ಕಾಳಿಯನ್ನೂ ಮೀರಿದ್ದು ಮಾತ್ರವಲ್ಲ, ಜಗತ್ತಿನ ಸಮಸ್ತ ಧರ್ಮಗಳನ್ನೂ ತಮ್ಮ ಅದ್ಭುತವಾದ ಸಾಧನೆಯ ಮೂಲಕ ಸಾಕ್ಷಾತ್ಕರಿಸಿಕೊಂಡು ಎಲ್ಲ ಧರ್ಮದ ತಿರುಳೂ ಒಂದೇ ಎಂದು ಸಾರಿದ ಅತ್ಯಪೂರ್ವ ಮಹಾಸಂತರು; ಶಿವಶರಣರು ಅನುಭಾವದ ಗಮ್ಯವೆಂದು ವರ್ಣಿಸುವ 'ಐಕ್ಯಸ್ಥಲ'ವನ್ನು ತಲುಪಿಯೂ ಅಲ್ಲಿಂದ ಕೆಳಕ್ಕೆ ಇಳಿದು ಬರುವ ಹಾಗೂ ಏರಿ ಹೋಗುವ 'ನಿತ್ಯ' ಮತ್ತು 'ಲೀಲೆ' ಯ ಶ್ರೇಣಿಗಳಲ್ಲಿ ನಿರಂತರ ಸಂಚಾರಿಯಾದವರು ಶ್ರೀರಾಮಕೃಷ್ಣರು.

ಭಗವತ್‌ಪರವಾದ ಒಂದು ವ್ಯಾಕುಲತೆ ಎಲ್ಲ ಅನುಭಾವ ಸಾಧಕರ ಸಮಾನ ಲಕ್ಷಣವಾಗಿದೆ. ಶ್ರೀರಾಮಕೃಷ್ಣರು ಹಗಲೂ

ಇರುಳೂ ಜಗನ್ಮಾತೆಯ ದೇವಸ್ಥಾನದಲ್ಲಿ ಅವಳ ಸಾಕ್ಷಾತ್ಕಾರಕ್ಕೆ ಹಂಬಲಿಸಿದವರು. ದೇವರಿಗಾಗಿ ನಿರಂತರವಾದ ವ್ಯಾಕುಲತೆ ಇದ್ದರೆ ಸಾಕು. ಆದರೆ ಈ ಲೋಕದಲ್ಲಿ "ಹೆಂಡತಿ ಮಕ್ಕಳಿಗಾಗಿ ಜನ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ. ಕಣ್ಣೀರು ಸಾಗರವಲ್ಲೇ ತೇಲಾಡಿಬಿಡುತ್ತಾರೆ ಹಣಕ್ಕಾಗಿ. ಆದರೆ ಭಗವಂತ ಬೇಕೆಂದು ಯಾರು ತಾನೇ ಕಣ್ಣೀರಿಡುತ್ತಾರೆ?" (ವ.ವೇ. ಪು. ೧೩, ಪೂ.) ಎನ್ನುತ್ತಾರೆ ರಾಮಕೃಷ್ಣರು, ಮಾಸ್ಟರ್ ಮಹಾಶಯನನ್ನು ಕುರಿತು. ಅಲ್ಲಮಪ್ರಭು ಇದಕ್ಕೆ ಸಂವಾದಿಯಾಗಿ 'ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ, ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ, ಗುಹೇಶ್ವರ, ನಿಮಗಾಗಿ ಸತ್ತವರನಾರನೂ ಕಾಣೆ' (ವ. ೧೯) ಎನ್ನುತ್ತಾರೆ. ಶ್ರೀರಾಮಕೃಷ್ಣರು ಈ ಬಗೆಯ ವ್ಯಾಕುಲತೆಯಿಂದ ತೊಡಗಿದ ಸಾಧನೆಯನ್ನೂ, ಅದರ ವೈವಿಧ್ಯವನ್ನೂ, ಅದರ ರಮ್ಯಾದ್ಭುತಗಳನ್ನೂ ತಮ್ಮ ಭಕ್ತರಿಗೆ ಅನನ್ಯವಾದ ರೀತಿಯಲ್ಲಿ ವರ್ಣಿಸಿದರೆ, ಶಿವಶರಣರೂ ತಮ್ಮ ವಚನಗಳಲ್ಲಿ, ಭಕ್ತಸ್ಥಲದ ಪಾಡುಗಳನ್ನು ವೈವಿಧ್ಯಮಯವಾಗಿ ತೋಡಿಕೊಂಡಿದ್ದಾರೆ. ಚೆನ್ನಮಲ್ಲಿಕಾರ್ಜುನನಿಗೆ ಒಲಿದ ಅಕ್ಕಮಹಾದೇವಿ:

ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು
ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು
ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿಪ್ಪೆನು
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಒಲುಮೆ ನೆಟ್ಟು ಹಸಿವು ತೃಷೆ ನಿದ್ರೆಯ ತೊರೆದೆನಯ್ಯಾ
(ವ. ೨೭೧)

ಎಂದು ತನ್ನ ಅವಸ್ಥೆಯನ್ನು ಹೇಳಿಕೊಂಡರೆ, ಬಸವಣ್ಣನವರು–

ವಾರವೆಂದರಿಯೆ, ದಿನವೆಂದರಿಯೆ
ಏನೆಂದರಿಯೆನಯ್ಯಾ!
ಇರುಳೆಂದರಿಯೆ ಹಗಲೆಂದರಿಯೆ
ಏನೆಂದರಿಯೆನಯ್ಯಾ !
ನಿಮ್ಮುವ ಪೂಜಿಸಿ ಎನ್ನುವ ಮರೆದೆ,
ಕೂಡಲಸಂಗಮದೇವಾ. (ವ. ೪೮೭)

ಎನ್ನುತ್ತಾರೆ. ಶ್ರೀರಾಮಕೃಷ್ಣರು ಕಾಳಿಯ ದೇವಸ್ಥಾನದಲ್ಲಿ ನಡೆಸಿದ ಕಠೋರ ಸಾಧನೆಯ ದಿನಗಳ ತೊಳಲಾಟವೂ ಇದೇ ರೀತಿಯದು. ಶ್ರೀರಾಮಕೃಷ್ಣರು ಈ ಲೋಕವನ್ನು ಕುರಿತು ಹೇಳುವಾಗ ಮತ್ತೆ ಮತ್ತೆ ಬಳಸುವ ಮಾತೆಂದರೆ 'ಕಾಮಿನೀ–ಕಾಂಚನ' ಮನುಷ್ಯ ಇವುಗಳ ಸೆಳೆತಕ್ಕೆ ವಶನಾಗಿ ದೈವತ್ವವನ್ನು ಮರೆಯುವುದಕ್ಕೆ 'ಮಾಯೆ' ಎಂದು ಹೇಳಲಾಗಿದೆ. ಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ಈ 'ಕಾಂಚನ'ದ ಬಗ್ಗೆ ಪ್ರಸ್ತಾಪಿಸಿದ್ದಾರೆ. "ಕಾಂಚನವೆಂಬ ನಾಯ ನೆಚ್ಚಿ ನಿಮ್ಮ ನಾನು ಮರೆದೆನಯ್ಯಾ; ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ" (ವ. ೩೧೩) "ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು"ಎಂದು ಮರುಳಾದೆ (ವ.೩೦೯) ಎಂದು ತಮ್ಮ ತೊಳಲಾಟವನ್ನು ಕೂಡಲಸಂಗನಿಗೆ ತೋಡಿಕೊಂಡಿದ್ದಾರೆ. ಈ ಕಾಮಿನೀ–ಕಾಂಚನಗಳು ಒಂದು ನೆಲೆಯಲ್ಲಿ ಮಾಯೆಯಂತೆ ತೋರಿದರೂ, ವಾಸ್ತವವಾಗಿ ಅವು ತಮಗೆ ತಾವೇ ಮಾಯೆಯಲ್ಲ. "ಇದು ನನಗೆ ಸೇರಿದ್ದು. ಇದು ನನಗೆ ಸೇರಿದ್ದು ಎಂಬುದಾಗಿ ಈ ವಸ್ತುಗಳನ್ನು ಪ್ರೀತಿಸುವುದಕ್ಕೆ ಮಾಯೆ ಅಂತ ಹೆಸರು" (ವ.ವೇ. ಪು.೭೩೨, ಪೂ. ) ಎಂದು ರಾಮಕೃಷ್ಣರು ಹೇಳುವುದರ ಮೂಲಕ ಆ ವಸ್ತುಗಳ ಬಗ್ಗೆ ನಾವು ಇರಿಸಿಕೊಳ್ಳುವ ಆಸಕ್ತಿಯನ್ನೆ ಮಾಯೆ ಎಂದು ವ್ಯಾಖ್ಯಾನಿಸುತ್ತಾರೆ. ಅಲ್ಲಮಪ್ರಭು ಇದೇ ಅಭಿಪ್ರಾಯವನ್ನು ಇನ್ನೂ ಚೆನ್ನಾಗಿ ಹೇಳಿದ್ದಾರೆ: "ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ!" (ವ.೭೨). ಒಟ್ಟಿನಲ್ಲಿ ಈ ಜಗತ್ತಿನ ವಸ್ತುಗಳ ವಿಚಾರದಲ್ಲಿ ನಮಗಿರುವ ಆಸಕ್ತಿಯೇ ಮಾಯೆ. ಇದಕ್ಕೆ ಇನ್ನೊಂದು ಹೆಸರು 'ಸಂಸಾರ'. ಶ್ರೀರಾಮಕೃಷ್ಣರು ಈ ಸಂಸಾರವನ್ನು, ಅದು ಮಾಯೆ ಎಂಬ ಕಾರಣದಿಂದ ನಿರಾಕರಿಸಬೇಕು ಎಂದೇನೂ ಹೇಳುವುದಿಲ್ಲ. ಯಾಕೆಂದರೆ ಸಂಸಾರ ಕೂಡ ಭಗವಂತನ ಸೃಷ್ಟಿಯೇ. "ಭಗವಂತನೇ ಒಂದು ರೂಪದಲ್ಲಿ ಮಹಾಮಾಯೆಯಾಗಿದ್ದಾನೆ" (ವ.ವೇ.ಪು ೭೮, ಪೂ.) ಎನ್ನುತ್ತಾರೆ ಶ್ರೀರಾಮಕೃಷ್ಣರು. "ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ" (ವ.೯೦೩) ಎನ್ನುತ್ತಾರೆ ಬಸವಣ್ಣನವರು.

ಸಂಸಾರದ ಸ್ವರೂಪವೇ 'ಮಾಯೆ', ಮತ್ತೆ ಮತ್ತೆ ಬಂದು ಆವರಿಸಿಕೊಳ್ಳುವುದೇ ಮಾಯೆ. ರಾಮಕೃಷ್ಣರು ತಮ್ಮ ಅನುಭಾವಿ ಕಾಣ್ಕೆಯೊಂದನ್ನು(vision) ಹೀಗೆ ವರ್ಣಿಸುತ್ತಾರೆ: "ಆತ (ಭಗವಂತ) ಪಾಚಿ ಕಟ್ಟಿಕೊಂಡಿದ್ದ ದೊಡ್ಡ ಸರೋವರವೊಂದನ್ನು ತೋರಿಸಿದ. ಗಾಳಿ ಅದರ ಪಾಚಿಯನ್ನು ಸರಿಸಿತು. ಒಡನೆಯೇ ನೀರು ಕಾಣಿಸಿಕೊಂಡಿತು. ರೆಪ್ಪೆ ಹೊಡೆಯುವುದರ ಒಳಗೆ ಪಾಚಿ ಎಲ್ಲಾ ಕಡೆಗಳಿಂದಲೂ ಕುಣಿಯುತ್ತ ಕುಣಿಯುತ್ತ ಮತ್ತೆ ಕಟ್ಟಿಕೊಂಡುಬಿಟ್ಟಿತು. ಆತ ತೋರಿಸಿದ, ನೀರೇ ಸಚ್ಚಿದಾನಂದ ಪಾಚಿಯೇ ಮಾಯೆ ಅಂತ. ಮಾಯೆಯ ದೆಸೆಯಿಂದ ಸಚ್ಚಿದಾನಂದನನ್ನು ನೋಡಲಾಗುತ್ತಿಲ್ಲ." (ವ.ವೇ.೫೧೧–೫೧೨. ಉತ್ತ.). ರಾಮಕೃಷ್ಣರ ಈ ಕಾಣ್ಕೆಗೆ ಸಂವಾದಿಯಾಗಿದೆ ಚೆನ್ನಬಸವಣ್ಣನವರ ಈ ಒಂದು ವಚನ: "ಜ್ಞಾನಾಮೃತ ಜಲನಿಧಿಯ ಮೇಲೆ ಸಂಸಾರವೆಂಬ ಹಾವಸೆ ಮುಸುಕಿಹುದು. ನೀರ ಮೊಗೆವವರು ಬಂದು ನೂಂಕಿದಲ್ಲದೆ ತೆರಳದು, ಮರಳಿ ಮುಸುಕುವುದ

ಮಾಣಿಸಯ್ಯ" (ಚೆ.ಬ.ವ ೧೨೭೫).

ಸಂಸಾರವನ್ನು ಕುರಿತು ಸಾಮಾನ್ಯವಾಗಿ ಎರಡು ನಿಲುವುಗಳಿವೆ. ಒಂದು, ಲೋಕಶಿಕ್ಷಣದಲ್ಲಿ ತೊಡಗುವವರು ಸಂಪೂರ್ಣವಾಗಿ ಸಂಸಾರವನ್ನು ತ್ಯಾಗ ಮಾಡಬೇಕು. ಇನ್ನುಳಿದವರು ಸಂಸಾರದೊಳಗೆ ಇದ್ದೂ ಅನಾಸಕ್ತರಾಗಿ ಬದುಕಿ, ಸಾಧನೆ ಮಾಡಬೇಕು. ಈ ಮಾತನ್ನು ಮತ್ತೆ ಮತ್ತೆ ರಾಮಕೃಷ್ಣರು ಹೇಳುತ್ತಾರೆ: "ಮೊದಲು ಕೈಗೆ ಎಣ್ಣೆ ಸವರಿಕೊಂಡು ಬಳಿಕ ಹಲಸಿನಹಣ್ಣು ಬಿಡಿಸಬೇಕು. ಇಲ್ಲದಿದ್ದರೆ ಕೈಗೆ ಅಂಟು ಹತ್ತಿಕೊಳ್ಳುತ್ತದೆ. ಭಗವದ್ ಭಕ್ತಿ ಎಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡು ಬಳಿಕ ಸಾಂಸಾರಿಕ ಕಾರ್ಯಗಳಲ್ಲಿ ಕೈ ಇಡಬೇಕು" (ವ.ವೇ.ಪ್ರ.೧೧. ಪ್ರ.). ಸಂಸಾರದೊಳಗೇ ಇದ್ದುಕೊಂಡು ಸಾಧನೆ ಮಾಡುವವರು "ಕೋಟೆಯೊಳಗೆ ನಿಂತು ಯುದ್ಧ ಮಾಡಿದ ಹಾಗೆ" (ವ.ವೇ.ಪು. ೩೯.ಪೂ). ಮೂಲತಃ ಇದೊಂದು ಯುದ್ಧ ಹಾಗೂ ಸವಾಲು. ಶಿವಶರಣರ ನಿಲುವು ಕೂಡಾ ಸಂಸಾರವನ್ನು ಕುರಿತು ಇದೇ ರೀತಿಯದು. ಬಸವಣ್ಣನವರ ಮಾತಿನಲ್ಲಿ ಹೇಳುವುದಾದರೆ "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ" (ವ.೧೫೫). ಈ ಲೋಕ ಸೃಷ್ಟಿಕರ್ತನ ಟಂಕಸಾಲೆ. ಇದರಲ್ಲಿ ತಯಾರಾದ ನಾಣ್ಯ ಇಲ್ಲಿಯೂ ಸಲ್ಲುತ್ತದೆ, ಅಲ್ಲಿಯೂ ಸಲ್ಲುತ್ತದೆ. ಈ ಸಲ್ಲುವ ಗುಣವನ್ನು ಜೀವ ಇಲ್ಲಿ ಪಡೆದುಕೊಳ್ಳಬೇಕು. ಅಲ್ಲಮಪ್ರಭು ಹೇಳುವಂತೆ ಈ ಸಂಸಾರ 'ಒಂದು ಕೊಟ್ಟ ಕುದುರೆ'. "ಕೊಟ್ಟ ಕುದುರೆಯ–ನೇರಲರಿಯದೆ ಮತ್ತೊಂದು ಕುದುರೆಯ ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ" (ವ.೧೨೭೭); ಆದಕಾರಣ ದೈವದತ್ತವಾದ ಈ ಬದುಕನ್ನು ಹತ್ತಿ, ಸವಾರಿ ಮಾಡಿ ಪಳಗಿಸಬೇಕು. ರಾಮಕೃಷ್ಣರು ಹೇಳಿದಂತೆ "ದೋಣಿ ನೀರಿನ ಮೇಲೆ ನಿಲ್ಲಬೇಕು. ನೀರು ದೋಣಿಯೊಳಗೆ ನಿಲ್ಲಬಾರದು." ಸಂಸಾರ ಭಯಂಕರವಾದದ್ದು ನಿಜ. ಅದಕ್ಕೂ ನಮಗೂ ಇರುವ ಸಂಬಂಧ ಬಸವಣ್ಣನವರ ಮಾತಿನಲ್ಲಿ ಹೇಳಬೇಕಾದರೆ "ಹಾವು ಹಾವಾಡಿಗನ ಸ್ನೇಹದಂತೆ" (ವ.೧೨); ಅದು ಯಾವಾಗ ಹೇಗೆ ಕಚ್ಚುವುದು ತಿಳಿಯದು. ಆದ್ದರಿಂದ ಅಕ್ಕಮಹಾದೇವಿ ಹೇಳುವಂತೆ 'ಹಾವಿನ ಬಾಯ ಹಲ್ಲ ಕಳೆದು ಹಾವನಾಡಿಸಬಲ್ಲಡೆ ಹಾವಿನ ಸಂಗವೇ ಲೇಸು ಕಂಡಯ್ಯ' (ವ.೧೦೦). ಸಂಸಾರವೆಂಬ ಹಾವಿನ, ಕಾಮ–ಕ್ರೋಧಾದಿಗಳ ವಿಷದ ಹಲ್ಲನ್ನು ಕಿತ್ತು ಅದರ ಸಹವಾಸದಲ್ಲಿರುವುದಾದರೆ, ಹಾಗೇ ಮಾಡಬಹುದು. ಈ ಒಂದು ಎಚ್ಚರವನ್ನು ಶ್ರೀರಾಮಕೃಷ್ಣರು ತಮ್ಮ ಅಂತರಂಗದ ಶಿಷ್ಯರಿಗೂ, ಗೃಹಸ್ಥ ಭಕ್ತರಿಗೂ ಬೇರೆ ಬೇರೆಯ ಮಾತುಗಳಲ್ಲಿ ಹೇಳಿದ್ದಾರೆ. ಸಂಸಾರದೊಳಗಿರುವ ಬದ್ಧ ಜೀವರು, ತಾನೇ ನೇಯ್ದ ನೂಲಿನ ಗೂಡಿನಲ್ಲಿ ಸಿಕ್ಕಿಬಿದ್ದ ರೇಷ್ಮೆ ಹುಳುವಿನ ಹಾಗೆ. "ಅವರನ್ನು (ಸಂಸಾರಿಗಳನ್ನು) ರೇಷ್ಮೆ ಹುಳುವಿಗೆ ಹೋಲಿಸಬಹುದು. ಅದು ಇಚ್ಛೆಪಟ್ಟರೆ ತನ್ನ ಗೂಡನ್ನು ಕತ್ತರಿಸಿ ಹೊರಕ್ಕೆ ಬರಬಲ್ಲುದು. ಆದರೆ ಬಹಳ ಪ್ರಯಾಸಪಟ್ಟು ತಾನೇ ಗೂಡನ್ನು ಕಟ್ಟಿರುವುದರಿಂದ ಅದು ಹಾಗೆ ಮಾಡಲಿಚ್ಛಿಸದು. ಅದು ಅಲ್ಲೇ ಸಾಯುತ್ತದೆ" (ವ.ವೇ.ಪ್ರ.೧೫೧: ೨೪೯: ೪೭೭ ಪೂ.). ಶ್ರೀರಾಮಕೃಷ್ಣರ ಈ ದೃಷ್ಟಾಂತ ಅಕ್ಕಮಹಾದೇವಿಗೂ ಪ್ರಿಯವಾದದ್ದು: "ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ, ತನ್ನ ನೂಲು ತನ್ನನೆ ಸುತ್ತಿ ಸಾಯುವಂತೆ ಮನಬಂದುದ ಬಯಸಿ ಬೇವುತಿದ್ದೇನೆ ಅಯ್ಯಾ" (ವ. ೩೨) ಎಂದು ತನ್ನ ಸ್ಥಿತಿಯನ್ನು ಸಂಸಾರಿಗಳೆಲ್ಲರ ಪರವಾಗಿ ವರ್ಣಿಸಿಕೊಳ್ಳುತ್ತಾಳೆ. ಈ ಆಸೆಯ ಬಲೆಯಿಂದ ಪಾರಾಗಿ ಹೋಗಬೇಕಾದರೆ ಇರುವುದು ಎರಡೇ ದಾರಿ: ಸಂಪೂರ್ಣ ಸಂಸಾರ ತ್ಯಾಗ ಅಥವಾ ಮಾನಸಿಕವಾಗಿ ಸಂಸಾರ ತ್ಯಾಗ ಮಾಡುತ್ತ ಅನಾಸಕ್ತನಾಗಿ ಬದುಕುವುದು. ಈ ಸ್ಥಿತಿಯಿಂದ ಬ್ರಹ್ಮ ಸಾಕ್ಷಾತ್ಕಾರವಾಯಿತು ಅಂದಮೇಲೆ ಈ ಲೋಕ ಮಾಯೆಯೂ ಅಲ್ಲ, ಮಿಥ್ಯೆಯೂ ಅಲ್ಲ. ಈ ಜೀವಜಗತ್ತಿಗೂ ಭಗವಂತನಿಗೂ ಇರುವ ಸಂಬಂಧ ಮಹಾಸಮುದ್ರಕ್ಕೂ ಅದರಲ್ಲಿ ಉದ್ಭವಿಸುವ ಗುಳ್ಳೆಗಳಿಗೂ ಇರುವ ಸಂಬಂಧದಂತೆ ಎನ್ನುತ್ತಾರೆ ರಾಮಕೃಷ್ಣರು: "ಭಗವಂತನನ್ನು ಒಂದು ಮಹಾಸಮುದ್ರಕ್ಕೂ ಜೀವಗಳನ್ನು ಅದರಲ್ಲಿ ತೇಲುವ ಗುಳ್ಳೆಗಳಿಗೂ ಹೋಲಿಸಬಹುದು. ಅವು ಆತನಲ್ಲಿಯೆ ಉದ್ಭವಿಸಿ ಆತನಲ್ಲಿಯೇ ಲಯವಾಗುತ್ತವೆ" (ವ.ವೇ ಪು. ೪೯೮ ಉತ್ತ.). ವಚನಕಾರ ಚಂದಿಮರಸನಿಗೆ ಸ್ಫುರಿಸುವುದು ಇದೇ ದೃಷ್ಟಾಂತವೇ "ಘನಗಂಭೀರ ಮಹಾವಾರಿಧಿಯಲ್ಲಿ ಘನ ತರಂಗ ಬುದ್ಬುದಂಗಳಾದುವಲ್ಲದೆ, ಬೇರಾಗಬಲ್ಲುದೆ? ಆತ್ಮನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡ ಕೋಟಿಗಳಾದುವಲ್ಲದೆ ಬೇರಾಗಬಲ್ಲುವೆ?" (ವ. ೬೦೩, ಸಂಕೀರ್ಣ ವಚನಗಳು).

ರಾಮಕೃಷ್ಣರು ಹೇಳುತ್ತಾರೆ: "ಜಗತ್ತು ಮಿಥ್ಯೆಯೇಕಾದೀತು?... ಭಗವಂತನ ದರ್ಶನವಾದ ನಂತರ ಬೋಧೆಯಾಗುತ್ತದೆ, ಆತನೇ ಜೀವ ಜಗತ್ತು ಆಗಿರುವುದಾಗಿ" (ವ.ವೇ. ಪು.೫೧೭ ಪೂ.). ಮತ್ತು ಈ ಹಂತದಲ್ಲಿ "ಯಾವ ಹೆಂಗಸನ್ನು ಕಂಡರೆ ಬಹಳ ಎಚ್ಚರಿಕೆಯಿಂದಿರಬೇಕೋ, ಭಗವಂತನ ದರ್ಶನಾನಂತರ ಅದೇ ಹೆಂಗಸು ಸಾಕ್ಷಾತ್ ಭಗವತಿಯೆ ಎಂಬ ಬೋಧೆಯಾಗುತ್ತದೆ" (ವ.ವೇ.ಪು.೧೦೦, ಉತ್ತ.). ಶಿವಶರಣ ಸಿದ್ಧರಾಮನೂ ಈ ಮಾತನ್ನು ಹೇಳುತ್ತಾನೆ "ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ" (ವ. ೧೨೪೨). ಕೈಹಿಡಿದ ಹೆಂಡತಿಯನ್ನೂ ಶ್ರೀರಾಮಕೃಷ್ಣರು ಸಾಕ್ಷಾತ್ ಭಗವತಿಯೆ ಎಂದು ಕಂಡದ್ದು ಈ ಒಂದು ನಿಲುವಿನಲ್ಲಿಯೇ.

(ಮುಂದುವರಿಯುವುದು)